ಸಂಯುಕ್ತ ಕರ್ನಾಟಕ

# ಈಜು: ಮೀನಾಕ್ಷಿಗೆ ದಾಖಲೆ ಸ್ವರ್ಣ




**ಬೆಂಗಳೂರು,ಅ.27:** ಉದ್ಯಾನನಗರಿಯಲ್ಲಿನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಆಹ್ವಾನಿತ ಈಜು ಚಾಂಪಿಯನ್‌ಶಿಪ್‌ನ ಎರಡನೇ ದಿನದಂದೂ ಆತಿಥೇಯ ಜೈನ್ ವಿವಿಯು ಪ್ರಾಬಲ್ಯ ಮೆರೆಯಿತು.

ಇಂದು ನಡೆದ ಮಹಿಳೆಯರ 400 ಮೀಟರ್ ಮೆಡ್ಲೆ ಈಜಿನಲ್ಲಿ ವಿಕೆಆರ್ ಜೈನ್ ವಿವಿಯ ಮೀನಾಕ್ಷಿ 5 ನಿಮಿಷ 21:13 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ನೂತನ ಕೂಟದಾಖಲೆಯೊಂದಿಗೆ ಚಿನ್ನ ಗೆದ್ದರು. ಈ ಹಿಂದೆ ವಿಟಿಯು ಬೆಳಗಾವಿಯ ಪೂಜಾ ಆಳ್ವಾ 5 ನಿಮಿಷ 25:80 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು.

ಇನ್ನು ಇದೇ ವಿಭಾಗದಲ್ಲಿ ಜೈನ್ ವಿವಿಯ ಮತ್ತೊಂದು ಈಜು ಪ್ರತಿಭೆ ಪೂರ್ವಾ ಶೆಟ್ಟಿ 5 ನಿಮಿಷ 41:35 ಸೆಕೆಂಡುಗಳಲ್ಲಿ ಗುರಿತಲುಪಿ ಬೆಳ್ಳಿ ಪದಕ ಗೆದ್ದರೆ, 5 ನಿಮಿಷ 43:56 ಸೆಕೆಂಡುಗಳಲ್ಲಿ ಗಮ್ಯ ಸ್ಥಾನ ತಲುಪಿದ ಕೋಲ್ಕತಾ ವಿವಿಯ ಅಂಜನಾ ಮೋಹನ್ ಕಂಚು ಗೆದ್ದರು.

ಪುರುಷರ 400 ಮೀಟರ್ ಮೆಡ್ಲೆ: 1. ಅರವಿಂದ್ (ವಿ.ಟಿ.ಯು. ಬೆಳಗಾವಿ) 4:45.86 ಸೆ. 2. ಧೋಕಲೆ ವಿರಾಜ್ (ಪುಣೆ ವಿವಿ) 4:57.84 ಸೆ. 3. ಬನಾದಿಯಾ ರಾಜ್ ಸಂಜಯ್ (4:58.38 ಸೆ.); ಮಹಿಳೆಯರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್; 1. ಪೂರ್ವಾ ಶೆಟ್ಟಿ (36.41 ಸೆ.), 2. ಪ್ರಿಯಾಂಕ (ದೆಹಲಿ) (36:81 ಸೆ.) 3. ದಿವ್ಯಾ ಗುರುಸ್ವಾಮಿ (ವಿ.ಟಿ.ಯು. ಬೆಳಗಾವಿ) (38.14 ಸೆ.) ಪುರುಷರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್: 1. ಜಾಶನ್‌ದೀಪ್ ಸಿಂಗ್ (ಪುಣೆ): (29.83 ಸೆ.), 2. ಪುಲ್ಕಿತ್ (ದೇವಿ ಲಾಲ್) (30.61 ಸೆ.), 3. ಅಮನ್ ಘಾಯ್ (31.34); 200 ಮೀಟರ್ ಫ್ರೀಸ್ಟೈಲ್: ಅಮನ್ ಘಾಯಿ (ಗುರುನಾನಕ್) (2:00.61 ಸೆ.), 2. ಸಂಜಯ್ ರಾಜ್ (ವಿಎನ್‌ಎಸ್‌ಜಿ) (2:01,43 ಸೆ.), 3. ಯುಗೇಶ್ ಕುಮಾರ್ (ಎಂಎಎಸ್) (2:02.11 ಸೆ.); ಡೈವಿಂಗ್: ಪುರುಷರ ಹೈ ಬೋರ್ಡ್: 1. ಗೌರವ್ ರಘುವಂಶಿ (ಡಿಎವಿವಿ) (239.20); 2. ಕೇತನ್ ಶಿಂದೆ (ಎಂಯುಎನ್) (205.15); 3. ಉದಿತ್ ಮಿಶ್ರಾ (ಎಲ್‌ಯುಕೆ) (178.30); ಮಹಿಳೆಯರು: 1. ಸ್ವಾತಿ ವಿದಪ್ (ಎಸ್‌ಒಎಲ್) (147.50); 2. ತನುಕಾ ಧಾರ (ಸಿಎಐ) (141.35); 3. ಗರಿಮಾ ಕಪೂರ್ (ಆರ್‌ಎಂಎಲ್‌ಎನ್‌ಎಲ್‌ಯು) (122.85).